Prajavani

Medicos rally against rural posting

Date: 30/07/2013 | Edition: Bangalore | Page: 3 | Source: Bureau | Clip size (cm): W: 13 H: 17

Clip: 1 of 1

ವೈದ್ಯಕೀಯ ಅಧ್ಯಯನ: ಹೃದ್ರೋಗತಜ್ಞ ಡಾ. ದೇವಿ ಶೆಟ್ಟಿ ಅಭಿಮತ

# ಗ್ರಾಮೀಣ ತರಬೇತಿ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪದವಿ ಮತ್ತು ಸ್ನಾತಕೋತ್ತರ ಪದವಿಯ ಅಧ್ಯಯನದಲ್ಲಿಯೇ ಆರು ತಿಂಗಳ ಕಾಲ ಗ್ರಾಮೀಣ ಪ್ರದೇಶಗಳ ಪ್ರಾಯೋಗಿಕ ತರಬೇತಿಯನ್ನು ಸೇರಿಸಬೇಕು' ಎಂದು ನಾರಾಯಣ ಹೃದಯಾಲಯದ ಅಧ್ಯಕ್ಷ ಡಾ.ದೇವಿ ಶೆಟ್ಟಿ ಒತ್ತಾಯಿಸಿದರು.

ಆರೋಗ್ಯ ಸೇವೆ ಪೂರೈಕೆದಾರರ ಸಂಘ (ಎಎಚ್‌ಪಿಐ) ಮತ್ತು ಭಾರತೀಯ ವೈದ್ಯಕೀಯ ಸಂಘವು (ಐಎಂಎ) ನಗರದಲ್ಲಿ ಸೋಮವಾರ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ 'ವೈದ್ಯನನ್ನು ರಕ್ಷಿಸಿ' ಎಂಬ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ವೈದ್ಯಕೀಯ ಪದವಿ ಸೀಟುಗಳ ಸಮ ಪ್ರಮಾಣದಲ್ಲಿ ಸ್ನಾತಕೋತ್ತರ ಪದವಿ ಸೀಟುಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಪ್ರಸ್ತುತ ಪದವಿಯಲ್ಲಿ 45,600 ಸೀಟುಗಳು ಲಭ್ಯವಿದ್ದು, ಭಾರತೀಯ ವೈದ್ಯಕೀಯ ಪರಿಷತ್ತು (ಎಂಸಿಐ) ಅನುಮತಿ ನೀಡಿದರೆ ಈ ವರ್ಷ 50,000 ಸೀಟು ದೊರಕುವ ನಿರೀಕ್ಷೆಯಿದೆ. ಆದರೆ, ಸ್ನಾತಕೋತ್ತರ ಪದವಿಯಲ್ಲಿ 12,000 ಸೀಟುಗಳು ಮಾತ್ರ ಲಭ್ಯವಿದೆ' ಎಂದರು.

'ಅಮೆರಿಕದಂತಹ ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೋಲಿಸಿದರೆ, ಅಲ್ಲಿ 19,000 ಪದವಿ ಸೀಟುಗಳಿದ್ದು, 32,000 ಸ್ನಾತಕೋತ್ತರ ಪದವಿ ಮತ್ತು ಫೆಲೋಶಿಪ್ ಸೀಟುಗಳಿವೆ. ಆದರೆ ಭಾರತದಲ್ಲಿ ಪ್ರತಿ ವರ್ಷ ಸುಮಾರು 40,000 ವೈದ್ಯರು ಪದವಿ ಪಡೆಯುತ್ತಾರೆ. ಲಭ್ಯವಿರುವ 12,000 ಸೀಟುಗಳಲ್ಲಿ ಒಂದು ಸೀಟನ್ನು ತಮ್ಮದಾಗಿಸಿಕೊಳ್ಳಲು ತಮ್ಮ ಸಹಪಾಠಿಗಳು ಮತ್ತು ಲಕ್ಷಾಂತರ ಹಿರಿಯ ವೈದ್ಯರೊಂದಿಗೆ ಪೈಪೋಟಿ ನಡೆಸಬೇಕು. ಕಳೆದ ವರ್ಷ 1.10 ಲಕ್ಷ ಕ್ಕೂ ಹೆಚ್ಚು ವೈದ್ಯರು ಎನ್‌ಇಟಿ ಪರೀಕ್ಷೆ ಅಡಿಯಲ್ಲಿ ಸ್ನಾತಕೋತ್ತರ ಪದವಿ ಪ್ರವೇಶಕ್ಕೆ ಪರೀಕ್ಷೆ ಬರೆದಿದ್ದರು' ಎಂದು ವಿವರಿಸಿದರು.

'ಗೈನಕಾಲಜಿಸ್ಟ್, ನ್ಯೂರೋಲಜಿಸ್ಟ್, ಸರ್ಜನ್, ರೇಡಿಯಾಲಜಿಸ್ಟ್ ಸೇರಿದಂತೆ ಒಬ್ಬ ವೈದ್ಯ ಒಂದು ಕ್ಷೇತ್ರದಲ್ಲಿ ವಿಶೇಷತೆ ಪಡೆದು ತಜ್ಞನಾಗಬೇಕಾದರೆ, ವೈದ್ಯಕೀಯ ಕ್ಷೇತ್ರದ



ಡಾ.ದೇವಿ ಶೆಟ್ಟಿ

ಯಾವುದಾದರೊಂದು ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆಯಬೇಕು. ಆದರೆ, ದೇಶದಲ್ಲಿ ಇಂದು ಸ್ನಾತಕೋತ್ತರ ಪದವಿ ಸೀಟುಗಳ ಸಂಖ್ಯೆ ಕಡಿಮೆಯಿದ್ದು ಮುಂದೆ ವಿಶೇಷ ತಜ್ಞರ ತೀವ್ರ ಕೊರತೆ ಕಾಡುತ್ತದೆ' ಎಂದು ಆತಂಕ ವ್ಯಕ್ತಪಡಿಸಿದರು.

'ದೇಶದಲ್ಲಿ ಅತಿ ಹೆಚ್ಚಿನ ವೈದ್ಯಕೀಯ ಸಂಸ್ಥೆಗಳಿದ್ದರೂ, ಗ್ರಾಮೀಣ ನಿಯುಕ್ತಿ ಹಾಗೂ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ನೀಡಿರುವ ಸೀಟುಗಳ ಸಂಖ್ಯೆಯಲ್ಲಿನ ಅಸಮತೋಲನವು, ವೈದ್ಯಕೀಯ ಪದವಿಯನ್ನು ಪಡೆಯಲು 13 ವರ್ಷಗಳನ್ನು ಕಳೆಯಬೇಕಾಗಿರುವುದು ಯುವ ವೈದ್ಯರನ್ನು ಸಂಕಷ್ಟಕ್ಕೆ ಸಿಲುಕಿಸಿದೆ' ಎಂದರು.

'ಯುಎಸ್‌ಎ ನಲ್ಲಿ ಉತ್ತಮ ಆರೋಗ್ಯಕ್ಕಾಗಿ ನೀಡುವ ಮಹತ್ವವನ್ನು ತರಬೇತಿ ಕೇಂದ್ರಗಳಿಗೂ ನೀಡುತ್ತಾರೆ. ಆದರೆ, ನಮ್ಮ ದೇಶದಲ್ಲಿ ಸರ್ಕಾರವು ಉತ್ತಮ ಆರೋಗ್ಯ ಪಡೆಯುವುದನ್ನು ಒಂದು ಹಕ್ಕಾಗಿ ಪರಿಗಣಿಸಿ, ತರಬೇತಿ ಕೇಂದ್ರಗಳಿಗೂ ಮಹತ್ವವನ್ನು ನೀಡಬೇಕು' ಎಂದರು.

ಭಾರತೀಯ ವೈದ್ಯಕೀಯ ಸಂಘದ ಪ್ರಧಾನ ಕಾರ್ಯದರ್ಶಿ ಡಾ.ನರೇಂದ್ರ ಸೈನಿ ಮಾತನಾಡಿ, 'ಗ್ರಾಮೀಣ ಸೇವೆಯನ್ನು ಪದವಿಯ ಒಂದು ಭಾಗವೆಂದು ಪರಿಗಣಿಸಬೇಕು. ವೈದ್ಯಕೀಯ ಅಧಿಕಾರಿಗೆ ಯಾವುದೇ ಬಡ್ತಿ ಪಡೆಯಲು ಒಂದು ವರ್ಷ ಗ್ರಾಮೀಣ ಸೇವೆಯನ್ನು ಕಡ್ಡಾಯಗೊಳಿಸಲಿ' ಎಂದು ಒತ್ತಾಯಿಸಿದರು.

'ಗ್ರಾಮೀಣ ಪ್ರದೇಶಗಳಲ್ಲಿ ಸೇವೆ ಸಲ್ಲಿಸುವ ವೈದ್ಯರಿಗೆ ಎಲ್ಲ ಮೂಲಭೂತ ಸೌಕರ್ಯಗಳನ್ನು ಒದಗಿಸಲಿ. ಐಎಎಸ್, ಐಪಿಎಸ್ ಅಧಿಕಾರಿಗಳಿಗೆ ಒದಗಿಸುವಂತೆ ಸೌಕರ್ಯಗಳನ್ನು ಒದಗಿಸಲಿ. ಆಗ, ವೈದ್ಯರು ಗ್ರಾಮೀಣ ಪ್ರದೇಶಗಳಿಗೆ ಹೋಗುತ್ತಾರೆ. ಅವರಿಗೆ ದೇಶದಲ್ಲಿಯೇ ಉದ್ಯೋಗವನ್ನು ಸೃಷ್ಟಿಸಿದರೆ, ನಮ್ಮ ಪ್ರತಿಭೆಗಳು ಹೊರದೇಶದ ಪಾಲಾಗುವುದು ತಪ್ಪುತ್ತದೆ' ಎಂದರು.